(ಹೆ ಗಳಲ್ಲಿ)

ಕ್ರ ಸಂ	ತಾಲ್ಲೂಕು	ಒಟ್ಟು ಭೌಗೋಳಿಕ ವಿಸ್ತೀರ್ಣ	ಜಲಾನಯನ ಅಭಿವೃದ್ಧಿಗೆ ಲಭ್ಯವಿರುವ ಪ್ರದೇಶ	ಪ್ರಾರಂಭದಿಂದ ವಿವಿಧ ಯೋಜನೆಗಳಲ್ಲಿ ಅಭಿವೃದ್ಧಿಪಡಿಸಿದ ಪ್ರದೇಶ (31 03 04ರ ವರೆಗೆ)	ಜಲಾನಯನ ಅಭಿವೃದ್ಧಿಗೆ ಬಾಕಿ ಇರುವ ಪ್ರದೇಶ
1	ಔರಾದ	121622	91373	65707	25666
2	ಬಸವಕಲ್ಯಾಣ	119438	83880	38730	45150
3	ಭಾಲ್ಕಿ	109259	49978	36616	13362
4	ಬೀದರ್	92203	57010	37540	19470
5	ಹುಮ್ನಾಬಾದ್	99243	51943	38752	13191
	ಒಟ್ಟು	541765	334184	217345	116839

ಆ) ಈ ಪ್ರದೇಶವನ್ನು ರಾಜ್ಯವಲಯ ಯೋಜನೆಯಾದ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ, ಹಾಗೂ ಜಿಲ್ಲಾ ವಲಯ ಯೋಜನೆಗಳಾದ ಹರಿಯಾಲಿ, ಸಂಪೂರ್ಣ ಗ್ರಾಮೀಣ ರೋಜ್ ಗಾರ್ ಯೋಜನೆ, ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ ಮತ್ತು ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆಯಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ

ಇ) ವಿಶ್ವಬ್ಯಾಂಕ್ ನೆರವಿನ ಸುಜಲಾ ಜಲಾನಯನ ಯೋಜನೆಯು ಬೀದರ್ ಜಿಲ್ಲೆಯಲ್ಲಿ ಜಾರಿಯಲ್ಲಿರುವುದು

ಈ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿಗಾಗಿ ಮೆಚ್ಚ ಮಾಡಲಾಗಿರುವ ಅನುದಾನದ ತಾಲ್ಲೂಕುವಾರು ವಿವರಗಳನ್ನು ಕೆಳಗೆ ನೀಡಲಾಗಿದೆ

ಲಕ್ಷಗಳಲ್ಲಿ

	01–02	02–03	03–04
ಔರಾದ್	48 76	214 90	37 821
ಬಸವಕಲ್ಯಾಣ	51 24	56 52	48 162
ಭಾಲ್ಕಿ	51 25	58 07	39 751
ಬೀದರ್	21 88	52 27	47 842
ಹುಮ್ನಾಬಾದ್	73 77	37 52	29 414
ಒಟ್ಟು	246 87	419 28	202 990

ಉ) ಬೀದರ್ ಜಿಲ್ಲೆಯ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2004–05ನೇ ಸಾಲಿನಲ್ಲಿ 204 770 ಲಕ್ಷ ರೂ ಗಳನ್ನು ಖರ್ಚು ಮಾಡಲು ಉದ್ದೇಶಿಸಲಾಗಿದೆ

466(548) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಹಣಕಾಸು ನಿರ್ವಹಣೆಯಲ್ಲಿ ಅವ್ಯವಹಾರ ಕಂಡುಬಂದಿದೆಯೇ

ಆ) ಅವ್ಯವಹಾರ ಯಾವ ಸ್ವರೂಪದಲ್ಲಿ ನಡೆದಿದೆ ಹಾಗೂ ಅವ್ಯವಹಾರದ ಮೊತ್ತವೆಷ್ಟು?

ಇ) ಈ ಅಕ್ರಮ ಅಸಮರ್ಪಕ ಹಣಕಾಸು ನಿರ್ವಹಣೆಯನ್ನು ಬೆಳಕಿಗೆ ತಂದವರು ಯಾರು?

ಈ) ಸದರಿ ಅವ್ಯವಹಾರ ಆರೋಪವನ್ನು ಧಾರವಾಡ ಕೃಷಿ ವಿ ವಿ ಯು ಒಪ್ಪಿಕೊಂಡಿದೆಯೇ?

ಉ) ಒಪ್ಪಿಕೊಂಡಿದ್ದಲ್ಲಿ ಇದಕ್ಕೆ ಕಾರಣರ್ಯಾರು ಇಂತಹವರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ (ವಿವರ ನೀಡುವುದು)?

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಶ್ರೀ ಬಿ ಎಸ್ ಅಂಚೆಟಗೇರಿ, ಕಾರ್ಪೋರೇಟರ್ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಇವರು ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲಿಕೈಗೊಳ್ಳಲಾದ ಕಾಮಗಾರಿಗಳಲ್ಲಿ ಅವ್ಯವಹಾರಗಳು ನಡೆದಿದೆ ಎಂದು ಸರ್ಕಾರಕ್ಕೆ ಘನವೆತ್ತ ರಾಜ್ಯಪಾಲರಿಗೆ ಹಾಗೂ ಲೋಕಾಯುಕ್ತದವರಿಗೆ ಆರೋಪ ಮಾಡಿದ್ದರು ಪ್ರತಿಯಾಗಿ ಕೃಷಿ ವಿಶ್ವವಿದ್ಯಾಲಯದವರು, ಮಾಡಿರುವ ಆರೋಪಗಳನ್ನು ತಳ್ಳಿ ಹಾಕುತ್ತಾ, ಸೂಕ್ತವಾದ ಉತ್ತರಗಳನ್ನು ಸಂಬಂಧಪಟ್ಟ ಕಾಗದ ಪತ್ರಗಳು, ದಾಖಲೆಗಳನ್ನು ನೀಡಲಾಗಿದ್ದು ಇವು ಲೋಕಾಯುಕ್ತ ಕಛೇರಿಯ ಪರಿಶೀಲನೆಯಲ್ಲಿವೆ

ಆ) ಆ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ

ಇ) ಶ್ರೀ ಬಿ ಎಸ್ ಅಂಚೆಟಗೇರಿ, ಕಾರ್ಪೋರೇಟರ್ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಇವರು ಆರೋಪ ಮಾಡಿದ್ದಾರೆ

ಈ) ಒಪ್ಪಿಕೊಂಡಿರುವುದಿಲ್ಲ

ಉ) ದೂರು ಲೋಕಾಯುಕ್ತರ ಪರಿಶೀಲನೆಯಲ್ಲಿದೆ ಲೋಕಾಯುಕ್ತರ ವರದಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು

461(742) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಸತತವಾಗಿ ಬರಗಾಲವಿರುವುದರಿಂದ ಈ ಸಮಯದಲ್ಲಿ ಜಾನುವಾರುಗಳಿಗೆ ಹಾಗೂ ಕೋಳಿಗಳಿಗೆ ತಗಲುತ್ತಿರುವ ಕಾಯಿಲೆಗಳನ್ನು ನಿಭಾಯಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಆ) ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಲ್ಲಿ ಮೇಲ್ಕಂಡ ಅವಧಿಯಲ್ಲಿ ಇದಕ್ಕಾಗಿ ವೆಚ್ಚ ಮಾಡಿದ ಹಣವೆಷ್ಟು ಹಾಗೂ ವಿವಿಧ ಜಿಲ್ಲೆಗಳಲ್ಲಿ ಕಾಯಿಲೆಯ ಎಷ್ಟು ಪ್ರಕರಣಗಳು ಪತ್ತೆಯಾಗಿದೆ,

ಇ) ಈ ಕಾಯಿಲೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಇಲ್ಲದೆ ಹತೋಟಿಯಲ್ಲಿಡಲು ಸರ್ಕಾರ ಯಾವ ಕಾರ್ಯಕ್ರಮಗಳನ್ನು ರೂಪಿಸಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಗೋಶಾಲೆಗಳ ಪ್ರಾರಂಭ

ಮೇವು ನಿಧಿಗಳ ಸ್ಥಾಪನೆ

ರೈತರಿಗೆ ಮೇವು ಸಾಗಾಣಿಕೆ ರಿಯಾಯತಿ

ಔಷಧಿಗಳ ಖರೀದಿ